ಕಾರ್ಯಗತಗೊಳಿಸಲು ಪುಷ್ಕರನ ಬಳಿಗೆ ಹೋದನು. ಮೋಸ ಕಾರ್ಯ ನಿಪುಣನಾದ ಕಲಿಯು ಅವನನ್ನು ಮರುಳು ಮಾಡುತ್ತ ಹೀಗೆ ಹೇಳಿದನು:

'ನೀನು ನಳಮಹಾರಾಜನ ಮಿತ್ರನೆಂಬುದನ್ನು ಕೇಳಿ ಬಂದಿದ್ದೇನೆ. ನೀನು ಅಪಕೀರ್ತಿಗೆ ಹೆದರಬೇಡ. ನನ್ನ ಮಾತು ಕೇಳಿದರೆ ಅಖಿಲ ಸಾಮ್ರಾಜ್ಯ ನಿನ್ನದಾಗುತ್ತದೆ.'

'ಓಹ್ ಕೃಪಾಳುವೇ ನೀನು ಯಾರು?'

'ನಾನು ಕಲಿಪುರುಷ. ನಾನು ಇಡೀ ಲೋಕದಲ್ಲಿ ಬಲಶಾಲಿ. ನಳನೊಡನೆ ದ್ಯೂತವನ್ನಾಡಿ ನಿನ್ನನ್ನು ಲೆತ್ತ (ಪಗಡೆಯಾಟ)ದಲ್ಲಿ ಗೆಲ್ಲಿಸುತ್ತೇನೆ. ಆಗದು ಎಂದು ಹೇಳಬೇಡ. ನಿನ್ನನ್ನು ಈ ರಾಜ್ಯದ ರಾಜನನ್ನಾಗಿ ಮಾಡುತ್ತೇನೆ.'

'ಇದು ಸಾಧ್ಯವೇ?'

'ನಾನು ಸುಳ್ಳು ಆಡುವವನಲ್ಲ. ನಳನನ್ನು ಕಿತ್ತು ಬಿಸಾಡುವೆ. ನೀನು ನನ್ನನ್ನು ನಂಬು.'

ನೀಚ ಪುಷ್ಕರನು ಕಲಿಯ ಮಾತನ್ನು ನಂಬಿದನು. ತನ್ನ ಹೃದಯದಲ್ಲಿ ಅದಕ್ಕೆ ಎಡೆಗೊಟ್ಟನು. ಸಂತೋಷದಿಂದ ಕಲಿಯೊಡನೆ ಹೊರಟನು.

ಶ್ರೀ ವಿಷ್ಣುವಿನ ಪ್ರತಿಬಿಂಬದಂತಿರುವ ನಳನ ಓಲಗಕ್ಕೆ ಅವರಿಬ್ಬರೂ ಸಂಭ್ರಮದಿಂದ ಬಂದರು. ಆಗ ನಳಮಹಾರಾಜನು ಚಿನ್ನ ಹಾಗೂ ರತ್ನಗಳಿಂದ ಹೊಳೆಯುವ ಮಂಟಪದಲ್ಲಿ ಇತರ ರಾಜರೊಂದಿಗೆ ಸಿಂಹಾಸನದಲ್ಲಿ ಕುಳಿತಿದ್ದನು. ಅವನ ಎಡಬಲದಲ್ಲಿ ಸುಂದರ ತರುಣಿಯರು ರಾಜನನ್ನು ಹೊಗಳುತ್ತ ಚಾಮರ ಬೀಸುತ್ತಿದ್ದರು. ಆಗ ಪುಷ್ಕರನು ನಳಮಹಾರಾಜನಿಗೆ ಕೈ ಮುಗಿದು ನಸುನಗುತ್ತ ಹೀಗೆ ಹೇಳಿದನು:

'ಅರಸನೇ ಕೇಳು. ಈ ಬ್ರಾಹ್ಮಣನು– ಸೂರ್ಯನಂತೆ ಕಾಂತಿಯಿಂದ ಹೊಳೆಯುವ ಎರಡು ಪಗಡೆಗಳನ್ನು ನಿನಗೆ ಕಾಣಿಕೆಯಾಗಿ ಕೊಟ್ಟಿದ್ದಾನೆ. ನನಗೆ ಪಗಡೆಯಾಡಲು ಮನಸ್ಸಾಗಿದೆ. ಪಗಡೆ ಮಣೆಯನ್ನು ತರಿಸು, ಆಡೋಣ. ಇದರಲ್ಲಿ ಯಾರೇ ಸೋಲಲಿ ಅವರು ರಾಜ್ಯವನ್ನು ಬಿಟ್ಟು ಹೆಂಡತಿಯೊಂದಿಗೆ ಕಾಡಿಗೆ ಹೋಗಬೇಕು.'

ಆ ನುಡಿ ಕೇಳಿ ನಳನೃಪನು ಮೌನದಿಂದಿರುವಾಗ ಪುಷ್ಕರನು ಆತನನ್ನು ಪಗಡೆಯಾಟಕ್ಕೆ ಸೆಳೆಯಲೇಬೇಕೆಂದು ತನ್ನ ಮಾತು ಮುಂದುವರಿಸಿ 'ಧರಣಿ ಪತಿಯೇ, ನೀನು ಇಷ್ಟು ಹರ್ಷದಿಂದಿರುವಾಗ, ಮನದಲ್ಲಿ ಉಂಟಾಗುವ ಕೊರತೆಯನ್ನು ಬಿಡು. ಇದು ರಾಜರ ಪಂಥ, ಯುದ್ಧಕ್ಕೆ, ಬೇಟೆಗೆ, ಜೂಜಿಗೆ ಕರೆದಾಗ ಹಿಂದೆಗೆಯುವುದು ರಾಜನೀತಿಯಲ್ಲ. ಮನಸ್ಸು ಮಾಡು' ಎಂದು ಹೇಳಿ ಮತ್ತೆ ಕೈ ಮುಗಿದನು.

ಮೇದಿನೀಪತಿ ಧರ್ಮರಾಜನೇ ಕೇಳು. ಸಜ್ಜನನು ಸಾಧುವು ಆದ ನಳನು ಆ ದುರಾತ್ಮನ ಹೃದಯದ ನೀಚತನವನ್ನು ಹೇಗೆ ತಿಳಿದಾನು? ಅವನು ಪುಷ್ಕರನನ್ನು ಹೊಗಳಿ ಪಗಡೆಯಾಡಲು ಕುಳಿತನು. ಕಲಿಪುರುಷನು ಬೇಧೋಪಾಯದಿಂದ, ಮಾಯೋಪಾಯದಿಂದ ಅರೆಗಳಿಗೆಯಲ್ಲಿ ಪುಷ್ಕರನಿಗೆ ಅನೇಕ ವಸ್ತುಗಳನ್ನು ಗೆಲಿಸಿಕೊಟ್ಟನು.

ಆ ಲೆತ್ತದ ಆಟದಲ್ಲಿ ನಳನಿಗೆ ಎರಡು ಐದು ಸಂಖ್ಯೆಗಳು ಬೀಳದೆ ಹೋದವು. ಬೇಡದಿದ್ದರೂ ಎರಡು, ಮೂರು ಸಂಖ್ಯೆಗಳು ಬೀಳುತ್ತಿದ್ದವು. ಹಾಗಾಗಿ ಉದ್ಧಟ ಪುಷ್ಕರನು ಮೊದಲನೆಯ ಆಟದಲ್ಲಿ ಗೆದ್ದನು. ಅದರಲ್ಲಿ ನಳನು ಬಗೆ ಬಗೆಯ ರತ್ನಗಳು, ಧನ ಧಾನ್ಯಗಳು,ಆನೆ ಕುದುರೆ ರಥ ಮುಂತಾದ ಅಗಣಿತ ಅಮೂಲ್ಯ ವಸ್ತುಗಳನ್ನು ಸೋತನು.

ನಳನೃಪನು ಜೂಜಿನಲ್ಲಿ ರಾಜ್ಯವನ್ನು, ಭಂಡಾರವನ್ನು ಕಳೆದುಕೊಂಡನು. ದುರದೃಷ್ಟದಿಂದ ಕೇಡುಗರ ಕೈ ಮೇಲಾಯಿತು. ಅರಸನ ಮುಖ ಬಾಡಿತು. ಅದನ್ನು ನೋಡಿ ಸಜ್ಜನರು 'ರಾಜ ಜೂಜಾಡಲು ಏಕೆ ಹೋದ? ವಿಧಿಯ ಕೈವಾಡದಲ್ಲಿ ಸೋತು ಹೋದನಲ್ಲ' ಎಂದು ವ್ಯಥೆಪಟ್ಟರು.

ದುಷ್ಟ ಪುಷ್ಕರನು ನಳನನ್ನು ನೋಡಿ ಕುಹಕ ನಗು ನಗುತ್ತ 'ರಾಜನೇ ಭಂಡಾರ, ಸುವಸ್ತುಗಳೆಲ್ಲವೂ ನನ್ನದಾದವು. ಇನ್ನು ಯಾವುದನ್ನು ಪಣವಾಗಿಡುವೆ ಹೇಳು' ಎಂದು ಕೇಳಲು ನಳನು ಆಲೋಚನೆಗೆ ಒಳಗಾದನು. ಮನಸ್ಸಿನಲ್ಲಿ– ನನ್ನ ಪತ್ನಿಯನ್ನೇ ಪಣವಾಗಿಡುವೆ, ಸೋತ ರಾಜ್ಯವನ್ನು ಗೆಲುವೆ– ಎಂದು ನಿಶ್ಚಯಿಸಿದನು.

ಅದನ್ನೆಲ್ಲ ನೋಡುತ್ತಿದ್ದ ಅರಸನ ಆಪ್ತ ಪುರೋಹಿತ ಅತಿ ದುಃಖಿತನಾಗಿ ಮನಕರಗಿ ರಾಣೀವಾಸಕ್ಕೆ ಬಂದನು. ತರುಣಿಯರ ಮೇಳದಲ್ಲಿ ಶ್ರೇಷ್ಠ ರತ್ನ ಪೀಠದಲ್ಲಿ ಹರುಷದಿಂದ ರಂಜಿಸುತ್ತಿರುವ ದಮಯಂತಿಯನ್ನು ಕಂಡು ಕೈಮುಗಿದು ಹೇಳಿದನು:

'ತಾಯಿ, ಮನಸ್ಸಿನಲ್ಲಿ ನೋಯಬೇಡಿರಿ. ನಮ್ಮ ಸರ್ವ ಸಂಪತ್ತು ನಷ್ಟವಾಯಿತು. ಇನ್ನು ಮುಂದಿನ ಸ್ಥಿತಿಯನ್ನು ನೀವೆ ಬಲ್ಲಿರಿ.'

ಕಮಲವನದಲ್ಲಿ ಮಂಜು ಸುರಿದಾಗ ಆಗುವಂತೆ ಸತಿ ದಮಯಂತಿಯ ಮುಖ ಚಿಂತೆಯಿಂದ ಬಾಡಿತು. ಅವಳು 'ಶ್ರೀಹರಿಯ ಕರುಣ ಕವಚವು ಸವೆದು ಹೋದ ಮೇಲೆ ಯಾರು ಏನು ತಾನೆ ಮಾಡಲು ಸಾಧ್ಯ? ಹರಹರ ದುಷ್ಟಬುದ್ಧಿಯ ಪುಷ್ಕರನು ಈ ರೀತಿ ಕೋಪಿಸಿಕೊಂಡನೇ?' ಎಂದು ತಳಮಳಗೊಂಡು ದುಃಖಿಸಿದಳು.

'ನಳನೃಪನು ರಾಜ್ಯ ಭ್ರಷ್ಟನಾಗಿ ಅಲೆಯುವಂತಾಯಿತೇ?' ಎಂದು ಹೇಳಿ ಸಂಕಟಪಡುತ್ತ ನಳನಿರುವೆಡೆಗೆ ಬಂದಳು. ಅವನ ಮನದ ಉಮ್ಮಳವನ್ನು ಅರಿತುಕೊಂಡಳು. ಕತ್ತಲ ರಾಹು ಗ್ರಹವು ಹಿಡಿದ ಸೂರ್ಯನಂತೆ ತೇಜೋಹೀನನಾದ ತನ್ನ ಪತಿಯನ್ನು ಕಂಡಳು. ಮನಸ್ಸಿಗೆ ಧೈರ್ಯ ತಂದುಕೊಂಡಳು. ಕೈ ಮುಗಿದು ಹೇಳಿದಳು:

'ಚಂದ್ರವಂಶ ಸಮುದ್ರದ ಚಂದ್ರ, ಶತ್ರುರಾಜ ಭಯಂಕರ, ಭಾಸ್ಕರತೇಜರಾದ ನಿಮಗೆ ಈ ಜೂಜಿನ ವ್ಯಸನ ಉಂಟಾಯಿತೇ? ಶಿವ ಶಿವ ಮಹಾದೇವ! ಇದು ಶ್ರೀಹರಿಯ ಕರುಣೆ. ಪುಷ್ಕರನು ನಿಮ್ಮನ್ನು ಸೋಲಿಸಿ ಬಿಟ್ಟನೇ? ಇದಕ್ಕೆಲ್ಲಕ್ಕೂ ವಿಧಿ ಕಾರಣ. ಇನ್ನು ಸಾಕು ಮಾಡಿ.'

ದಮಯಂತಿಯ ಮಾತಿಗೆ ಸಭೆಯಲ್ಲಿದ್ದವರು 'ಎಲ್ಲವೋ ಕ್ಷುದ್ರನೇ, ನಿನ್ನ ಪಗಡೆಯಾಟ ನಿಲ್ಲಿಸು' ಎಂದು ಪುಷ್ಕರನಿಗೆ ಬೈದು ಹೇಳಿದರು.

ಆಗ ಹಾದಿ ತಪ್ಪಿದ ಜಿಂಕೆ ಬೇಡನ ಬಲೆಗೆ ಬಿದ್ದ ಹಾಗೆ ನಳನ ಸ್ಥಿತಿಯಾಗಿತ್ತು. ದುಃಖಭರದಲ್ಲಿ ಪತ್ನಿಗೆ,

'ದಮಯಂತಿಯೇ ಕೇಳು. ಅಪಜಯದ ನಾರಿಯ ಸೆರಗನ್ನು ಹಿಡಿದೆನು. ರಾಜ್ಯ ಲಕ್ಷ್ಮಿಯನ್ನು ಪರರಿಗೆ ಕೊಟ್ಟೆನು. ಉಳಿದಿರುವುದು ಈ ಶರೀರ ಮಾತ್ರ. ಹೀಗಾದುದಕ್ಕೆ ಹೆದರಬೇಡ. ತರುಣಿಯಾದ ನೀನು ಕಾಡು, ಗಿರಿಗಹ್ವರಗಳಲ್ಲಿ ಹೇಗೆ ಕಷ್ಟಪಡುವೆ? ಹರ ಹರಾ!' ಎಂದು ಹೇಳಿ ನಿಟ್ಟುಸಿರು ಬಿಟ್ಟನು.

## ಸತ್ಯವನು ಕೈಹಿಡಿದು ಸಲಹೆಂದಳು ಸರೋಜ ಮುಖಿ

ಆಗ ದಮಯಂತಿಯು ನಳನನ್ನು ಸಂತೈಸುತ್ತ ಹೇಳಿದಳು:

'ಶಶಿಕುಲ ಶಿರೋಮಣಿಯೇ ಕೇಳು. ಹೆತ್ತವರು, ಸತಿಸುತರು, ಮನೆ ಗೃಹಕೃತ್ಯಗಳು, ಬಂಧು ಬಾಂಧವರು, ರಾಜರು, ಭೋಗಸಂಪತ್ತು ಶಾಶ್ವತ ವಾದುದಲ್ಲ. ಶರೀರ ಸುಖ ಅಶಾಶ್ವತ ಎಂಬುದನ್ನು ತಿಳಿ. ಸತ್ಯ ಮಾತ್ರ ಶಾಶ್ವತವಾದುದು. ಅದರ ಕೈಹಿಡಿದು ನನ್ನನ್ನು ಕಾಪಾಡು.'

ನಳನನ್ನು ಸಮಾಧಾನಪಡಿಸಿ, ದುಃಖಿಸುವುದು ಬೇಡ ಎಂದು ಹೇಳಿ ತನ್ನ ಅಂತಃಪುರಕ್ಕೆ ಹೊರಡಲು ಅನುವಾದಳು. ಅದನ್ನು ಕಂಡ ದುಷ್ಟ ಪುಷ್ಕರನು 'ಜೂಜಿನಲ್ಲಿ ಸೋತ ನಂತರ, ನೀವು ಹೇಗೆ ರಾಜ್ಯದಲ್ಲಿರುವಿರಿ?' ಎಂದು ಪ್ರಶ್ನೆ ಮಾಡಿದನು.

ಆಗ ನಳ ತನ್ನ ಪತ್ನಿಯೊಂದಿಗೆ ವನವಾಸಕ್ಕೆ ತೆರಳಲು ಸಿದ್ಧನಾದನು. ತಾನು ತೊಟ್ಟಿದ್ದ ರತ್ನಾಭರಣಗಳನ್ನು ತೆಗೆದೊಗೆದನು. ದಮಯಂತಿಯೊಂದಿಗೆ ಕುಲಗುರುಗಳ ಪಾದಕ್ಕೆ ನಮಸ್ಕರಿಸಿ, ಅರಮನೆಯನ್ನು ಬಿಟ್ಟು ಹೊರಟನು. ಅದನ್ನು ನೋಡಿ ನಗರದ ಜನರೆಲ್ಲ ನೊಂದು ದುಃಖಿಸಿ ಕಣ್ಣೀರು ಗರೆದರು. ಗೋಳಿಟ್ಟು ಕೂಗಾಡಿದರು. ಇಡೀ ನಗರವು ಶೋಕರಸದಲ್ಲಿ ತುಂಬಿ ಹೋಯಿತು.

ನಳನೃಪನ ಪರಿಚಾರಕರು, ಪರಿವಾರದವರು, ಮಂತ್ರಿಗಳು, ಓಲಗದ

**ವ್ಯತ್ಯಾಸ**

ಬೆಳಗು,
ಆಶಾವಾದಿಗೆ,
ಪ್ರತಿದಿನದ ಬೆರಗು..
ನಿರಾಶಾವಾದಿಗೆ..
ಮೇಲೇಳಬೇಕಲ್ಲ ಎಂಬ ಕೊರಗು..!

★ ಗಣೇಶ್‌ಪ್ರಸಾದ್ ಬಿ.ವಿ.



ಈಶ್ವರ